MAY 05, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ಮಾಹಿತಿ ತಂತ್ರಜ್ಞಾನ ಸೇವೆಗಳ, ರಾಜ್ಯದ ಒಟ್ಟು ರಫ್ತು ವಹಿವಾಟು, 6 ದಶಾಂಶ 2 ಲಕ್ಷ ಕೋಟಿ ರೂಪಾಯಿಗಳಿಗೆ, ಏರಿಕೆ.
- ಕೇಂದ್ರ ಕನಿಷ್ಟ ಬೆಂಬಲ ಬೆಲೆ ಯೋಜನೆ; ಸೂರ್ಯಕಾಂತಿ ಖರೀದಿಗೆ, ಕೇಂದ್ರದ ಒಪ್ಪಿಗೆ.
- ರೈತ ಉತ್ಪಾದಕರ ಸಂಸ್ಥೆ; ವಿಜಯಪುರದಲ್ಲಿ ರಫ್ತು ಗುಣಮಟ್ಟದ ತೋಟಗಾರಿಕೆ ಬೆಳೆಗಾರರಿಗೆ, ತರಬೇತಿ.
- ಅಮೃತ ಸರೋವರ ಯೋಜನೆ; ತುಮಕೂರು ಜಿಲ್ಲೆಯ ಕೆರೆಗಳ ಪುನಃಶ್ಚೇತನ.
- ಇಂದು, ವಿಶ್ವ ಅಸ್ತಮಾ ಜಾಗೃತಿ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ನವೋದ್ಯಮ ಕ್ಷೇತ್ರದಲ್ಲಿ, ಕರ್ನಾಟಕ ವಿಶ್ವಕ್ಕೆ 8ನೇ ಸ್ಥಾನದಲ್ಲಿದೆ; ಮುಂಬರುವ ಐದು ವ ರ್ಗಗಳಲ್ಲಿ, 3ನೇ ಸ್ಥಾನಕ್ಕೇರಲಿದೆ ಎಂದು, ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಫೇಸ್‌ಬುಕ್‌ನಲ್ಲಿ ಈ ವಿಷಯ ತಿಳಿಸಿರುವ ಸಚಿವರು, ಮಾಹಿತಿ ತಂತ್ರಜ್ಞಾನ ಸೇವೆಗಳ ರಫ್ತಿನಲ್ಲಿ, ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ. ರಾಜ್ಯದ ಐ.ಟಿ. ಸೇವೆಗಳ ರಫ್ತು ವಹಿವಾಟು, 6 ದಶಾಂಶ 2 ಲಕ್ಷ ಕೋಟಿ ರೂಪಾಯಿ ದಾಟಿದೆ ಎಂದಿದ್ದಾರೆ. ಎಲಿವೇಟ್, ಬಿಯಾಂಡ್ ಬೆಂಗಳೂರು, ಲೀಪ್ ಮುಂತಾದ ಯೋಜನೆಗಳು, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ, ಹೂಡಿಕೆಯನ್ನು ಆಕರ್ಷಿಸಿ, ಉದ್ಯಮಗಳನ್ನು ವಿಸ್ತರಿಸುತ್ತಿವೆ, ಎಂದು ಹೇಳಿದ್ದಾರೆ.

<><><>

ಕೇಂದ್ರದ ಕನಿಷ್ಟ ಬೆಲೆ ಬೆಂಬಲ ಯೋಜನೆ' ಅಡಿ, ಕ್ವಿಂಟಾಲ್ ಸೂರ್ಯಕಾಂತಿಗೆ, 7 ಸಾವಿರದ 721 ರೂಪಾಯಿ ರೈತರಿಗೆ ನೀಡಿ, ಖರೀದಿಸಲು, ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ತಿಳಿಸಿದ್ದಾರೆ.

<><><>

ಕೇಂದ್ರ ಪುರಸ್ಕೃತ, ಪ್ರಧಾನಮಂತ್ರಿ ಕಿರು ಆಹಾರ ಉದ್ಯಮಗಳ, ನಿಯಮಬದ್ಧ ಗೊಳಿಸುವಿಕೆ ಯೋಜನೆ ಅಡಿ, ರೈತ ಉತ್ಪಾದಕರ ಸಂಸ್ಥೆಗಳ ಮೂಲಕ, ವಿಜಯಪುರ ಜಿಲ್ಲೆಯ ರೈತರಿಗೆ, ತರಬೇತಿ ಹಾಗೂ ರಫ್ತು ಮಾಹಿತಿ ನೀಡಿ, ಪ್ರೋತ್ಸಾಹಿಸಲಾಗುತ್ತಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ಎಂ.ಬಿ ಪಾಟೀಲ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಮಹಾರಾಷ್ಟ್ರ ರಾಜ್ಯದ, ನಾಸಿಕ್‌ನ ಸಹ್ಯಾದ್ರಿ ಫಾರ್ಮ್ ಸಹಯೋಗದಲ್ಲಿ, ತಿಕೋಟಾದಲ್ಲಿ, 100 ಎಕರೆಯಲ್ಲಿ, ಉತ್ಕೃಷ್ಟ ದರ್ಜೆಯ ಆರಾ–36 ತಳಿ ದ್ರಾಕ್ಷಿಯನ್ನು, ಪ್ರಗತಿಪರ ಕೃಷಿಕ ಮಹಿಳೆ, ಕೃ ಣ್ವೇಣಿ ಬೆಳೆಯುತ್ತಿದ್ದಾರೆ. ಉತ್ತಮ ಇಳುವರಿ ಸಹ ಪಡೆಯುತ್ತಿದ್ದಾರೆ ಎಂದು, ಸಚಿವರು ಶ್ಲಾಘಿಸಿದ್ದಾರೆ.

<><><>

ರಾಷ್ಟ್ರೀಯ ಜೀವನೋಪಾಯ ಮಿ ನ್ – ಎನ್.ಆರ್.ಎಲ್.ಎಂ ಅಡಿ, ಸ್ವಸಹಾಯ ಸಂಘದ ಮಹಿಳೆಯರೆ ನಿರ್ವಹಿಸುವ, ಅಕ್ಕ ಕೆಫೆ, ದುಡಿಯುವ ಮಹಿಳೆಯರ ಸ್ವಾವಲಂಬನೆ ಹಾಗೂ ಆರ್ಥಿಕ ಪ್ರಗತಿಗೆ ಕಾರಣವಾಗಿದೆ ಎಂದು, ಚಾಮರಾಜನಗರ ಸಂಸದ ಸುನೀಲ ಬೋಸ ತಿಳಿಸಿದ್ದಾರೆ. ಗುಂಡ್ಲುಪೇಟೆ ತಾಲೂಕು, ತೆರಕಣಾಂಬಿಯಲ್ಲಿ, ನೂತನ ಅಕ್ಕ ಕೆಫೆ ಉದ್ಘಾಟಿಸಿ ಅವರು ಮಾತನಾಡಿದರು. ಮತ್ತೊಂದು, ಅಕ್ಕ ಕೆಫೆಯನ್ನು ಮಲೈ ಮಹದೇಶ್ವರ ಬೆಟ್ಟದಲ್ಲಿಯೂ ಶೀಘ್ರ ಆರಂಭಿಸಲಾಗುವುದು, ಎಂದರು.

<><><>

ಕೇಂದ್ರ ಪುರಸ್ಕೃತ ಅಮೃತ ಸರೋವರ ಯೋಜನೆಯಡಿ, ತುಮಕೂರು ಜಿಲ್ಲೆ ಶಿರಾ ತಾಲೂಕಿನ ಕೆರೆಗಳ ಹೂಳೆತ್ತಿಸಿ, ಜಲಪಾತ್ರವನ್ನು ವಿಸ್ತರಿಸಲು ಯೋಜಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಶುಭಾ ಕಲ್ಯಾಣ ತಿಳಿಸಿದ್ದಾರೆ. ಹೊಸ ದಿಲ್ಲಿಯಲ್ಲಿ, ಕರ್ನಾಟಕದ ವಿಶೇಷ ಪ್ರತಿನಿಧಿ, ಟಿ.ಬಿ ಜಯಚಂದ್ರ ಅವರ ಅಧ್ಯಕ್ಷತೆಯಲ್ಲಿ, ಜಿಲ್ಲಾಧಿಕಾರಿ ಕಚೇರಿಯ, ನ್ಯಾಯಾಲಯ ಸಭಾಂಗಣದಲ್ಲಿ ಜರುಗಿದ ಸಭೆಯಲ್ಲಿ, ಈ ನಿರ್ಣಯ ಕೈಗೊಳ್ಳಲಾಗಿದೆ ಎಂದು, ಎಕ್ಸ್ ಮಾಧ್ಯಮದಲ್ಲಿ ಮಾಹಿತಿ ನೀಡಿದ್ದಾರೆ. ಕೆರೆಗಳ ಹೂಳನ್ನು, ರೇಲ್ವೆ ಹಾಗೂ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳಿಗೆ ಬಳಸುವ ಕುರಿತು ಚಿಂತನೆ ನಡೆದಿದೆ ಎಂದು, ಹೇಳಿದ್ದಾರೆ.

<><><>

'ಅಸ್ತಮಾ ಬಾಧಿತ ಪ್ರತಿಯೊಬ್ಬರಿಗೂ, ಅಲರ್ಜಿ ನಿವಾರಕ ಔಷಧಗಳ ತುರ್ತು ಪೂರೈಕೆ' ಎಂಬ, ಧ್ಯೇಯದೊಂದಿಗೆ, ಇಂದು, ವಿಶ್ವ ಅಸ್ತಮಾ ಜಾಗೃತಿ ದಿನಾಚರಣೆ. ಅಸ್ತಮಾ ಬಗ್ಗೆ ಭಯ ಹೋಗಲಾಡಿಸಿ, ಜನ ಜಾಗೃತಿ ಮೂಡಿಸುವ ಹಲವು ಕಾರ್ಯಕ್ರಮಗಳನ್ನು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಜ್ಯಾದ್ಯಂತ ಇಂದು ಆಯೋಜಿಸಿದೆ. ವಿಶ್ವಾದ್ಯಂತ, 25 ಕೋಟಿ ಹಾಗೂ ಭಾರತದಲ್ಲಿ 1 ಕೋಟಿ 50 ಲಕ್ಷ ಜನ ಅಸ್ತಮಾ ಬಾಧಿತರಿದ್ದಾರೆ ಎಂದು, ಅಂದಾಜಿಸಲಾಗಿದೆ. ಪ್ರದೇಶ ಸಮಾಚಾರಕ್ಕಾಗಿ ಮಂಗಳೂರಿನ ಡಾಕ್ಟರ್ ಮುರಲಿಮೋಹನ ಚೂಂತಾರು ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಮುರಲಿಮೋಹನ ಚೂಂತಾರು ಧ್ವನಿ – 48 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ, ಬಿಜೆಪಿ ಅಭ್ಯರ್ಥಿಗಳು ಜಯಗಳಿಸಿದ ಹಿನ್ನೆಲೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ದುರ್ಗದ ಬೈಲಿನಲ್ಲಿ, ವಿಧಾನಸಭೆ ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ, ಶಾಸಕ ಮಹೇಶ ಟೆಂಗಿನಕಾಯಿ ನೇತೃತ್ವದಲ್ಲಿ, ಪಕ್ಷದ ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ, ವಿಜಯೋತ್ಸವ ಆಚರಿಸಿದರು.

<><><>

ಹಜ್ ಯಾತ್ರಿಕರಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಲ್ಲಿ, ಶುಭ ಕೋರಿ, ಬೀಳ್ಕೊಟ್ಟರು. ಕರ್ನಾಟಕ ಹಜ್ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಜ್ ಯಾತ್ರಿಕರು, ತಮ್ಮ ಪ್ರಾರ್ಥನೆಯಲ್ಲಿ, ರಾಜ್ಯದ ಒಳಿತನ್ನು ಬಯಸುವಂತೆ ಕೋರಿದರು. ಕಲಬುರಗಿ ಹಾಗೂ ಹುಬ್ಬಳ್ಳಿಯಲ್ಲಿ, ಹಜ್ ಭವನಗಳನ್ನು ಶೀಘ್ರ ನಿರ್ಮಿಸುದಾಗಿ, ತಿಳಿಸಿದರು.

<><><>

ರಾಜ್ಯದ ಅರಣ್ಯದ ಅಂಚಿನಲ್ಲಿ, ಅಗ್ನಿ ಅವಘಡಗಳನ್ನು ನಿಯಂತ್ರಿಸಲು, ಸನ್ನದ್ಧತೆ, ಹಾಗೂ ಉದ್ದೇಶಪೂರ್ವಕ ಬೆಂಕಿ ಹಚ್ಚುವ, ಕಿಡಿಗೇಡಿಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮಕ್ಕೆ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಈ ಮಾಹಿತಿ ನೀಡಿರುವ ಸಚಿವರು, ಬೀದರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ನಡೆಸಿ, ಜಿಲ್ಲೆಯ ಎಲ್ಲ ತಾಲೂಕುಗಳ ಕುಡಿಯುವ ನೀರಿನ ಸಮಸ್ಯೆ ನಿರ್ವಹಿಸಲು, ಸೂಕ್ತ ಸಿದ್ಧತೆ ಕೈಗೊಳ್ಳಲು, ಜಿಲ್ಲಾಡಳಿತಕ್ಕೆ ಸೂಚಿಸಿದ್ದಾಗಿ, ತಿಳಿಸಿದ್ದಾರೆ.

<><><>

9ನೇ ರಾಷ್ಟ್ರೀಯ ಜಾನುವಾರು ರೋಗ ತಡೆ, ಕಾಲು ಬಾಯಿ ರೋಗ ವಿರುದ್ಧದ ಲಸಿಕೆ ನೀಡಿಕೆ, ಮಾಸಿಕ ಅಭಿಯಾನ, ಈ ತಿಂಗಳ 22ರ ವರೆಗೆ, ರಾಜ್ಯಾದ್ಯಂತ ನಡೆಯಲಿದೆ. ಈ ಅಭಿಯಾನದ ಕುರಿತು, ಪಶುಪಾಲನಾ ಇಲಾಖೆಯ, ಹಾವೇರಿ ಜಿಲ್ಲೆ ಉಪನಿರ್ದೇಶಕ, ಡಾಕ್ಟರ್ ಶಿವಯೋಗಿ ಎಲಿ, ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಶಿವಯೋಗಿ ಎಲಿ ಧ್ವನಿ – 46 ಸೆಕೆಂದುಗಳು

<><><>

ಚಿಕ್ಕಮಗಳೂರು ತಾಲೂಕು, ಅರಳಗುಪ್ಪೆ ಗ್ರಾಮದ ಕಾರಂಜಿ ಕೆರೆಯಲ್ಲಿ ಮುಳುಗಿ, ನಾಲ್ವರು ಮಕ್ಕಳು ಮೃತಪಟ್ಟ ದುರ್ಘಟನೆ, ನಿನ್ನೆ ಸಂಜೆ ನಡೆದಿದೆ. ಒಟ್ಟು ಐವರು ಮಕ್ಕಳು ಕೆರೆ ಬಳಿ ಆಟವಾಡುತ್ತ, ನೀರಿಗೆ ಬಿದ್ದಿದ್ದು, ಓರ್ವ ಬಾಲಕಿಯನ್ನು ಸ್ಥಳೀಯರು ರಕ್ಷಿಸಿದ್ದಾರೆ. ನೀರಿಗೆ ಬಿದ್ದವರೆಲ್ಲರೂ, 8 ರಿಂದ 12 ವರ್ಷದ ಮಕ್ಕಳಾಗಿದ್ದಾರೆ.

<><><>

ಬೆಂಗಳೂರಿನ, ಕ್ರಾಂತಿವೀರ ಶ್ರೀ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಹಾಗೂ ರಾಯಚೂರು ಜಿಲ್ಲೆ ಸಿಂಧನೂರು ರೈಲು ನಿಲ್ದಾಣಗಳ ಮಧ್ಯೆ, ದಿನಂಪ್ರತಿ ಮಧ್ಯರಾತ್ರಿ 12.15ಕ್ಕೆ ಸಂಚರಿಸುವ ರೈಲಿನ ವೇಳೆ ಬದಲಿಸಲಾಗಿದ್ದು, ಜೂನ್ 20ನೇ ತಾರೀಖಿನಿಂದ, ರಾತ್ರಿ 11:40ಕ್ಕೆ ಹೊರಡಲಿದೆ ಎಂದು, ನೈಋತ್ಯ ರೈಲ್ವೆ ತಿಳಿಸಿದೆ.

<><><>

ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು, ಬೇಸೂರು ಗ್ರಾಮದಲ್ಲಿ, ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆಯಾಗಲಿದೆ ಎಂಬ, ಊಹಾಪೋಹಗಳನ್ನು, ಜಿಲ್ಲಾಧಿಕಾರಿ ಎನ್.ಹೇಮಂತ, ಅಲ್ಲಗಳೆದಿದ್ದಾರೆ.  ಕೆಲ ಸಾಮಾಜಿಕ ಜಾಲತಾಣಗಳಲ್ಲಿ, ನ್ಯಾಶನಲ್ ಥರ್ಮಲ್ ಪವರ್ ಕಾರ್ಪೋರೇಷನ್, ಬೇಸೂರು ಗ್ರಾಮದಲ್ಲಿ, ಪರಮಾಣು ವಿದ್ಯುತ್ ಸ್ಥಾವರ ಸ್ಥಾಪಿಸಲು, ಜಮೀನು ಗುರುತಿಸಿದೆ ಹಾಗೂ ಈ ಸಂಬಂಧ ಪ್ರಕ್ರಿಯೆಗಳು ನಡೆಯುತ್ತಿವೆ ಎಂಬ ಮಾಹಿತಿ, ವದಂತಿಯಾಗಿದೆ. ಸಾರ್ವಜನಿಕರು ಆತಂಕಕ್ಕೆ ಒಳಗಾಗಬಾರದು ಎಂದು, ಜಿಲ್ಲಾಧಿಕಾರಿ ಮನವಿ ಮಾಡಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಮಾಹಿತಿ ತಂತ್ರಜ್ಞಾನ ಸೇವೆಗಳ, ರಾಜ್ಯದ ಒಟ್ಟು ರಫ್ತು ವಹಿವಾಟು, 6 ದಶಾಂಶ 2 ಲಕ್ಷ ಕೋಟಿ ರೂಪಾಯಿಗಳಿಗೆ, ಏರಿಕೆ.
- ಕೇಂದ್ರ ಕನಿಷ್ಟ ಬೆಂಬಲ ಬೆಲೆ ಯೋಜನೆ; ಸೂರ್ಯಕಾಂತಿ ಖರೀದಿಗೆ, ಕೇಂದ್ರದ ಒಪ್ಪಿಗೆ.
- ರೈತ ಉತ್ಪಾದಕರ ಸಂಸ್ಥೆ; ವಿಜಯಪುರದಲ್ಲಿ ರಫ್ತು ಗುಣಮಟ್ಟದ ತೋಟಗಾರಿಕೆ ಬೆಳೆಗಾರರಿಗೆ, ತರಬೇತಿ.
- ಅಮೃತ ಸರೋವರ ಯೋಜನೆ; ತುಮಕೂರು ಜಿಲ್ಲೆಯ ಕೆರೆಗಳ ಪುನಃಶ್ಚೇತನ.
- ಇಂದು, ವಿಶ್ವ ಅಸ್ತಮಾ ಜಾಗೃತಿ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>